ಅನೇಕ ವಿಚಾರಗಳನ್ನು ಕಲಿತೆ. ಅವರಿಗೆ ತಮಿಳು, ಹಿಂದಿ, ಗುಜರಾತಿ, ಪಂಜಾಬಿ ಭಾಷೆಗಳು ಗೊತ್ತಿದ್ದವು. ಸಹಜವಾಗಿ ಅವುಗಳನ್ನೆಲ್ಲ ನಾನು ಕಲಿತೆ.

ಕಥಕ್ ನೃತ್ಯವನ್ನು ಗುರುಗಳಾದ ಕುಂದನ್‌ಲಾಲ್ ಗಂಗಾನಿ ಮತ್ತು ಒಡಿಸ್ಸಿ ನೃತ್ಯವನ್ನು ಗುರು ಮಾಯಾಧರ್ ರಾವುತ್ ಮತ್ತು ಅಲೋಕ್ ಪಣಿಕರ್, ಪಾಶ್ಚಾತ್ಯ ಬ್ಯಾಲೆಯನ್ನು ಲಂಡನ್‌ನ ಮರಿಯಾನ್ನೆ ಬಾಲ್ಚಿನ್ ಅವರ ಬಳಿ ಕಲಿತೆ. ಗುರು ಶಾಂತಾರಾಘವನ್ ಅವರು ನನಗೆ ಭರತನಾಟ್ಯದ ಗುರುಗಳು. ಗುರು ಕೃಷ್ಣ ಕುಮಾರ್ ಅವರು ಕೂಚಿಪುಡಿ ನೃತ್ಯ ಗುರುಗಳು. ಹೀಗೆ ನೃತ್ಯವೇ ನನ್ನ ಉಸಿರು ಎಂದರೆ ತಪ್ಪಲ್ಲ. ಹೀಗೆ ನರ್ತಿಸುತ್ತ, ಪ್ರಯಾಣಿಸುತ್ತ, ಶಿಕ್ಷಣ ಪಡೆಯುತ್ತ ನನ್ನ ಬಾಲ್ಯ, ಯೌವನದ ದಿನಗಳು ಸುಂದರವಾಗಿದ್ದವು. ಆದರೆ ನಾನು ಮೊದಲು ವೇದಿಕೆಯಲ್ಲಿ ನೃತ್ಯ ಮಾಡಿದ್ದು ಮೈಸೂರಿನಲ್ಲಿ ಎಂದರೆ ನೀವು ನಂಬುತ್ತೀರಾ?

◆ **ಅದು ಹೇಗೆ?**

ನಾನು ಬಹುಶಃ ಮೂರೋ ನಾಲ್ಕೋ ವರ್ಷದವನಿದ್ದಾಗ ಅಮ್ಮ ನೃತ್ಯಕಾರ್ಯಕ್ರಮಗಳನ್ನು ಕೊಡಲು ದೇಶದ ವಿವಿಧೆಡೆಗೆ ತೆರಳುತ್ತಿದ್ದರು. ಆಗೆಲ್ಲ ನಾನು ಅವರ ಕಂಕುಳಿನಲ್ಲಿಯೇ ಇರುತ್ತಿದ್ದೆ. ಹಾಗೆ ಒಮ್ಮೆ ಮೈಸೂರಿನ (ಬಹುಶಃ) ಜಗನ್ಮೋಹನ ಅರಮನೆಯಲ್ಲಿ ನೃತ್ಯ ಪ್ರದರ್ಶನ ನೀಡುವಂತೆ ಅಮ್ಮನಿಗೆ ಕರೆಯೋಲೆ ಬಂದಿತ್ತು. ಆಗೆಲ್ಲ ಬರೋಡದಿಂದ ರೈಲಿನಲ್ಲಿ ಎರಡು ದಿನಗಳ ಕಾಲ ಪ್ರಯಾಣಿಸಿ ಮೈಸೂರು ತಲುಪಬೇಕಾಗಿತ್ತು. ಮೈಸೂರಿನಲ್ಲಿ ರೈಲು ಇಳಿಯುವಷ್ಟರಲ್ಲಿ ಅಮ್ಮ ಹೈರಾಣಾಗಿದ್ದಳು ಅನಿಸುತ್ತದೆ. ನನ್ನನ್ನು ಎತ್ತಿಕೊಂಡು, ಚೀಲಗಳನ್ನು ಹಿಡಿದುಕೊಂಡು ನಿಂತಿದ್ದ ಅಮ್ಮನನ್ನು ಕಂಡು, ಆಯೋಜಕರು, 'ಸರೋಜಾ ಅವರೆಲ್ಲಿ? ನೀವು ಅವರ ಮಗುವನ್ನು ನೋಡುವ ಕೆಲಸದಾಕೆಯೇ? ಅವರೆಲ್ಲಿದ್ದಾರೆ?' ಎಂದು ಪ್ರಶ್ನಿಸಿದರಂತೆ. 'ನಾನು ಅಶೀಶ್‌ನ ಕೆಲಸದಾಕೆ ಹೌದು. ನಾನೇ ಸರೋಜಾ' ಎಂದು ಅಮ್ಮ ಹೇಳಿದರಂತೆ. ಹೀಗೆ ಅಂದು ಸಂಜೆ ಅಮ್ಮ ನೃತ್ಯ ಕಾರ್ಯಕ್ರಮ ನೀಡುವಾಗ ನನ್ನನ್ನು ವೇದಿಕೆಯ ಪಕ್ಕದ, ಪರದೆಯ ಮರೆಯಲ್ಲಿ ನಿಲ್ಲಲು ಹೇಳಿದ್ದಳು. ಅಮ್ಮ ಒಂದಾದ ಮೇಲೊಂದು ನೃತ್ಯವನ್ನು ಮಾಡುತ್ತಲೇ ಇರುವುದನ್ನು ಕಂಡು, ಚಪ್ಪಾಳೆಗಳನ್ನು ಕೇಳಿ ಕೇಳಿ ಸುಸ್ತಾಗಿ ನಾನೂ ಹೆಜ್ಜೆ ಹಾಕಲು ಆರಂಭಿಸಿದೆ. ಹೆಜ್ಜೆ ಹಾಕುತ್ತ ಪರದೆಯ ಮರೆಯಿಂದ ವೇದಿಕೆಗೆ ಬಂದಿರುವುದು ನನ್ನ ಅರಿವಿಗೇ ಬಂದಿರಲಿಲ್ಲ. ಅಮ್ಮನೂ ನನ್ನನ್ನು ಅಡಚಣೆಯೆಂದು ಭಾವಿಸದೇ ಉತ್ಸಾಹದಿಂದಲೇ ತನ್ನ ನೃತ್ಯ ಮುಂದುವರೆಸಿದ್ದಳು. ನಾನೂ ತೋಚಿದಂತೆ ನೃತ್ಯ ಮಾಡುತ್ತಾ ಇದ್ದೆ. ಅಮ್ಮ ನೃತ್ಯ ಮುಗಿಸಿದಾಗ ನಾನೂ ಮುಕ್ತಾಯ ಮಾಡಿ, ವೇದಿಕೆಯ ಹಿಂದೆ ತೆರಳಿದೆ. ಆ ದಿನಗಳಲ್ಲಿ ಈ ಕಾರ್ಯಕ್ರಮದ ಬಗ್ಗೆ ಬಹಳಷ್ಟು ಚರ್ಚೆಯಾಗಿತ್ತು. ಇಂದಿನ ಭಾಷೆಯಲ್ಲಿ ಹೇಳುವುದಾದರೆ 'ವೈರಲ್' ಆಗಿತ್ತು.

◆ **ಭಾರತದಲ್ಲಿ ನೃತ್ಯದ ಸ್ಥಿತಿ-ಗತಿ ಈಗ ಹೇಗಿದೆ?**

ಭಾರತೀಯರ ಪೈಕಿ ಈಗ ಅನೇಕರು ನೃತ್ಯ ಕಲಿಯುತ್ತಿದ್ದಾರೆ. ಹಲವಾರು ನೃತ್ಯೋತ್ಸವ, ನಾಟ್ಯೋತ್ಸವಗಳು ನಡೆಯುತ್ತಿವೆ. ಆದರೆ ನೃತ್ಯಗಳ ಗುಣಮಟ್ಟವು ಸಾಧಾರಣಮಟ್ಟದಲ್ಲಿರುತ್ತದೆ ಅಥವಾ ಕಳಪೆಯಾಗಿರುತ್ತದೆ. ಒಂದು ನೃತ್ಯ ತರಗತಿಯಲ್ಲಿ ಐವತ್ತಕ್ಕೂ ಹೆಚ್ಚು ಮಕ್ಕಳನ್ನು ಸೇರಿಸಿಕೊಂಡು ನೃತ್ಯ ಹೇಳಿಕೊಡುವುದಾದರೆ ನೃತ್ಯದ ಗುಣಮಟ್ಟ ಚೆನ್ನಾಗಿರುವಂತೆ ನೋಡಿಕೊಳ್ಳುವುದಾದರೂ ಹೇಗೆ.

ನಮ್ಮ ದೇಶದಲ್ಲಿ ನಿಜವಾದ ಗುರುಗಳು ಕೆಲವೇ ಮಂದಿ ಉಳಿದುಕೊಂಡಿದ್ದಾರೆ. ಹೆಚ್ಚಿನವರು ನೃತ್ಯದ ಅಂಗಡಿಗಳನ್ನು ತೆರೆದಿರುವ ನೃತ್ಯ ಶಿಕ್ಷಕರಷ್ಟೆ. ವಿದ್ಯಾರ್ಥಿಯು ಏನು ಕಲಿಯುತ್ತಾರೆ ಅಥವಾ ಬೆಳವಣಿಗೆ ಹೇಗಿದೆ ಎಂದು ಗಮನಿಸುವ ಜವಾಬ್ದಾರಿಯನ್ನು ಅವರೇನೂ ತೆಗೆದುಕೊಳ್ಳುವುದಿಲ್ಲ. ಸುಮ್ಮನೇ ಐಟಂಗಳನ್ನು ಕಲಿಸುತ್ತಾ ಹೋಗುತ್ತಾರಷ್ಟೆ. ಹೀಗಿದ್ದಾಗ ಕಲಾಪ್ರಕಾರಗಳ ಮೂಲಕ ಅಧ್ಯಾತ್ಮವನ್ನೋ, ಧ್ಯಾನವನ್ನೋ ಸಾಧ್ಯವಾಗಿಸಿಕೊಳ್ಳುವುದಾದರೂ ಹೇಗೆ ? ಆ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನವೇ ಇಲ್ಲವಾಗಿದೆ. ಭಾರತದ ಎಲ್ಲ ಕಲಾಪ್ರಕಾರಗಳು ಅದರಲ್ಲಿಯೂ ನೃತ್ಯ ಸಂಗೀತ ಸೇರಿದಂತೆ ಶಾಸ್ತ್ರೀಯ ಕಲಾಪ್ರಕಾರಗಳು ದೈವಿಕತೆಯೊಂದಿಗೆ ನಂಟು ಹೊಂದಿವೆ. ಕಲಾವಿದರು ಅನ್ವೇಷಿಸಿದಷ್ಟೂ ಹೊಸಬೆಳಕನ್ನು ಪಡೆಯುವ ಸಾಧ್ಯತೆ ಇಲ್ಲಿ ಯಥೇಷ್ಟವಾಗಿದೆ. ನಾವು ಕಲೆಯನ್ನು ಆರಾಧಿಸಬೇಕೇ